SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar

SDUAHER

UNIVERSITY LIBRARY & LEARNING RESOURCE CENTRE

Online Newspaper Clipping Service
**Dtd- Thursday, 06th, September- 2018**

ಕೋಲಾರಪತ್ರಿಕೆ



# ಅರಸು ಕಾಲೇಜಿನಲ್ಲಿ ರಾಧಾಕೃಷ್ಣನ್‌ರ ಸ್ಮರಣೆ



ಕೋಲಾರ ಸೆ ೫

ಶಿಕ್ಷಕರ ಶಿಕ್ಷಕ ರಾಧಾಕೃಷ್ಣನ್ ಮಾರ್ಗದರ್ಶನದಿಂದಾಗಿ ನಾನು ಗುರಿ ಸಾಧಿಸಲು ಉತ್ತಮ ವೈದ್ಯ ಮತ್ತು ಶಿಕ್ಷಕನಾಗಲು ಸಾಧ್ಯವಾಯಿತೆಂದು ರಾಯಚೂರು ನವೋದಯ ವೈದ್ಯಕೀಯ ಕಾಲೇಜಿನ ಪ್ರೊ|| ಎಸ್.ಬಿ.ಹಿರೇಮಠ್ ಸ್ಮರಿಸಿದರು.

ನಗರದ ದೇವರಾಜ ಅರಸ್ ವೈದ್ಯಕೀಯ ಕಾಲೇಜಿನಲ್ಲಿ ಹಳೆ ವಿದ್ಯಾರ್ಥಿಗಳ ಸಂಘದಿಂದ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಧಾರವಾಡದ ಕರ್ನಾಟಕ ವಿಜ್ಞಾನ ಕಾಲೇಜಿನಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ಆಡಿದ ಮಾತು ನನ್ನ ಗುರಿ ಸಾಧನೆಗೆ ಸ್ಫೂರ್ತಿಯಾಯಿತೆಂದು ಹೇಳಿದರು.

ವೈದ್ಯ ವೃತ್ತಿ ಹಣ ಗಳಿಕೆಯ ಸಾಧನವಲ್ಲ, ವೈದ್ಯನ ಗುರಿ ಸೇವೆಯಲ್ಲದೇ ಮತ್ತೇನೂ ಇಲ್ಲ. ಯಾರೂ ನಿಮ್ಮ ಮೇಲೆ ಒತ್ತಡ ಹಾಕಿ ವೈದ್ಯಕೀಯ ಕಾಲೇಜಿಗೆ ಕರೆತಂದಿಲ್ಲ, ನೀವೇ ಸ್ವಯಂ ಪ್ರೇರಿತರಾಗಿ ವೈದ್ಯಕೀಯ ಕಾಲೇಜಿಗೆ ಬಂದಿದ್ದು ಹೀಗಾಗಿ ಈಗಿನಿಂದಲೇ ಸೇವಾ ಮನೋಭಾವ ಬೆಳೆಸಿಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡಿ ರೋಗಿಗಳ ಮುಖದಲ್ಲಿ ನಗೆ ಕಾಣುವಂತೆ ಆಗಬೇಕೆಂದು ಸೂಚಿಸಿದರು.

ದೇವರಾಜ ಅರಸ್ ವಿವಿ ಉಪ ಕುಲಪತಿ ಡಾ|| ಸಿ.ವಿ. ರಘುವೀರ್ ಮಾತನಾಡಿ ರಾಧಾಕೃಷ್ಣನ್ ಅವರ ಆದರ್ಶಗಳನ್ನು ಶಿಕ್ಷಕರು ಪಾಲಿಸುವ ಮೂಲಕ ಮಾದರಿಯಾಗಬೇಕೆಂದು ಮನವಿ ಮಾಡಿದರು.

ಶಿಕ್ಷಕರ ದಿನಾಚರಣೆ ಅಂಗವಾಗಿ ಉತ್ತಮ ಗುರು ಪ್ರಶಸ್ತಿ ಪಡೆದಿರುವ ಹಿರೇಮಠ್ ಅವರನ್ನು ಸನ್ಮಾನಿಸಿದ್ದು ನನ್ನ ಭಾಗ್ಯ. ಧಾರವಾಡದ ಕಾಲೇಜಿನಲ್ಲಿ ಸಹಪಾಠಿ ಆಗಿದ್ದ ಹಿರೇಮಠ್ ದಡ್ಡನೆಂದು ಪರಿಗಣಿಸಲ್ಪಟ್ಟಿದ್ದ ನನ್ನನ್ನು ಶಿಕ್ಷಕರು ಬಿ ಕ್ಲಾಸ್‌ಗೆ ಹಾಕಿದ್ದರಿಂದ ತಪ್ಪಿದ್ದ ಸಂಪರ್ಕ ಮೂರು ದಶಕಗಳ ತರುವಾಯ ಮತ್ತೆ ಸಾಧ್ಯವಾಗಿದೆ ಎಂದರು.

ವೈದ್ಯಕೀಯ ಕಾಲೇಜಿನ ಡಾ. ಸರಳಾ, ಡಾ.ಹೇಮಲತಾ ಮತ್ತು ಡಾ.ಸಂಗೀತಾ ಅವರಿಗೆ ಉತ್ತಮ ಶಿಕ್ಷಕರ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕ್ರಿಕೆಟ್‌ನಲ್ಲಿ ವಿಜೇತರಾದ ವೈದ್ಯಕೀಯ ಅಧೀಕ್ಷಕ ಡಾ. ಲಕ್ಷ್ಮಯ್ಯ ನೇತೃತ್ವದ ತಂಡಕ್ಕೆ ಟ್ರೋಫಿ ನೀಡಲಾಯಿತು.

ಅಂತರಗಂಗೆ

# ದೇವರಾಜ ಅರಸ್ ವೈದ್ಯಕೀಯ ಕಾಲೇಜಿನಲ್ಲಿ ಶಿಕ್ಷರಕ ದಿನಾಚರಣೆ




ಕೋಲಾರ,ಸೆ.5– ಶಿಕ್ಷಕರ ಶಿಕ್ಷಕ ರಾಧಾಕೃಷ್ಣನ್ ಮಾರ್ಗದರ್ಶನದಿಂದಾಗಿ ನಾನು ಗುರಿ ಸಾಧಿಸಲು ಮೂಲಕ ಉತ್ತಮ ವೈದ್ಯ ಮತ್ತು ಶಿಕ್ಷಕನಾಗಲು ಸಾಧ್ಯವಾಯಿತೆಂದು ರಾಯಚೂರು ನವೋದಯ ವೈದ್ಯಕೀಯ ಕಾಲೇಜಿನ ಪ್ರೊಫೆಸರ್ ಎಸ್.ಜಿ.ಹಿರೇಮಠ್ ಸ್ಮರಿಸಿದರು.

ನಗರದ ದೇವರಾಜ ಅರಸ್ ವೈದ್ಯಕೀಯ ಕಾಲೇಜಿನಲ್ಲಿ ಹಳೇ ವಿದ್ಯಾರ್ಥಿಗಳ ಸಂಘದಿಂದ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಧಾರವಾಡದ ಕರ್ನಾಟಕ ವಿಜ್ಞಾನ ಕಾಲೇಜಿನಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ಅವರು ಮಾಡಿದ ಭಾಷಣ ನನ್ನ ಗುರಿ ಸಾಧನೆಗೆ ಸ್ಫೂರ್ತಿಯಾಯಿತೆಂದು ಹೇಳಿದರು.

ವೈದ್ಯ ವೃತ್ತಿ ಹಣ ಗಳಿಕೆಯ ಸಾಧನವಲ್ಲ, ವೈದ್ಯನ ಗುರಿ ಸೇವೆಯಲ್ಲದೇ ಮತ್ತೇನೂ ಇಲ್ಲ. ಯಾರೂ ನಿಮ್ಮ ಮೇಲೆ ಒತ್ತಡ ಹಾಕಿ ವೈದ್ಯಕೀಯ ಕಾಲೇಜಿಗೆ ಕರೆತಂದಿಲ್ಲ, ನೀವಾಗಿಯೇ ಸ್ವಯಂ ಪ್ರೇರಿತರಾಗಿ ವೈದ್ಯಕೀಯ ಕಾಲೇಜಿಗೆ ಬಂದಿದ್ದು ಹೀಗಾಗಿ ಈಗಿನಿಂದಲೇ ಸೇವಾ ಮನೋಭಾವವನ್ನು ಬೆಳೆಸಿಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡಿ ರೋಗಿಗಳ ಮುಖದಲ್ಲಿ ನಗೆ ಕಾಣುವಂತಾಗಬೇಕು ಎಂದು ಸೂಚಿಸಿದರು.

ದೇವರಾಜ ಅರಸ್ ವಿವಿ ಉಪಕುಲಪತಿ ಡಾ.ಸಿ.ವಿ.ರಘುವೀರ್ ಮಾತನಾಡಿ, ರಾಧಾಕೃಷ್ಣನ್ ಅವರ ಆದರ್ಶಗಳನ್ನು ಶಿಕ್ಷಕರು ಪಾಲಿಸುವ ಮೂಲಕ ಮಾದರಿಯಾಗಬೇಕೆಂದರು.

ಶಿಕ್ಷಕರ ದಿನಾಚರಣೆ ಅಂಗವಾಗಿ ಉತ್ತಮ ಗುರು ಪ್ರಶಸ್ತಿ ಪಡೆದಿರುವ ಹಿರೇಮಠ್ ಅವರನ್ನು ಸನ್ಮಾನಿಸಿದ್ದು ನನ್ನ ಭಾಗ್ಯ, ಧಾರವಾಡದ ಕಾಲೇಜಿನಲ್ಲಿ ಸಹಪಾಠಿ ಆಗಿದ್ದ ಹಿರೇಮಠ್ ವಿದ್ಯಾರ್ಥಿ ದೆಸೆಯಿಂದಲೇ ಉತ್ತಮ ನಾಯಕತ್ವ ಗುಣವನ್ನು ಹೊಂದಿದ್ದು ಸದಾ ಅಧ್ಯಯನಶೀಲರಾಗಿರುತ್ತಿದ್ದರು.

ದಡ್ಡನೆಂದು ಪರಿಗಣಿಸಲ್ಪಟ್ಟಿದ್ದ ನನ್ನನ್ನು ಶಿಕ್ಷಕರು ಬಿ ಕ್ಲಾಸ್‌ಗೆ ಹಾಕಿದ್ದರು. ಹೀಗಾಗಿ ಎ ಸೆಕ್ಷನ್‌ನಲ್ಲಿ ಉಳಿದುಕೊಂಡ ಹಿರೇಮಠ್ ಅವರ ಸಂಪರ್ಕ ತಪ್ಪಿಹೋಗಿದ್ದು 30 ವರ್ಷಗಳ ನಂತರ ನಮ್ಮಿಬ್ಬರ ಭೇಟಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ವೈದ್ಯಕೀಯ ಕಾಲೇಜಿನ ಡಾ.ಸರಳಾ, ಡಾ.ಹೇಮಲತಾ ಮತ್ತು ಡಾ.ಸಂಗೀತಾ ಅವರಿಗೆ ಈ ಸಂದರ್ಭದಲ್ಲಿ ಉತ್ತಮ ಶಿಕ್ಷಕರ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕ್ರಿಕೆಟ್‌ನಲ್ಲಿ ವಿಜೇತರಾದ ವೈದ್ಯಕೀಯ ಅಧೀಕ್ಷಕ ಡಾ.ಲಕ್ಷ್ಮಯ್ಯ ನೇತೃತ್ವದ ತಂಡಕ್ಕೆ ಟ್ರೋಫಿ ನೀಡಲಾಯಿತು. ಡಾ.ಪ್ರಶಾಂತ್(ಕ್ರಿಕೆಟ್) ಮತ್ತು ಡಾ.ಶಶಿರೇಖಾ(ಥ್ರೋಬಾಲ್) ಅವರಿಗೆ ಉತ್ತಮ ಆಟಗಾರರ ಪ್ರಶಸ್ತಿ ನೀಡಲಾಯಿತು.ದೇವರಾಜ ಅರಸ್ ವೈದ್ಯಕೀಯ ಕಾಲೇಜಿನ ಪ್ರಿನ್ಸಿಪಾಲ್ ಡಾ.ನರೇಂದ್ರ ಕುಮಾರ್, ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ.ದಿನೇಶ್, ಉಪಾಧ್ಯಕ್ಷ ಡಾ.ಮುನಿನಾರಾಯಣ, ಕಾರ್ಯದರ್ಶಿ ಡಾ.ಭಾಸ್ಕರನ್, ಉಮಾಹಿರೇಮಠ್ ಇದ್ದರು.